ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನಾನು ಕೇಳುವುದಕ್ಕೆ ಬಯಸಿದ್ದು ನಾನು ಸಿ.ಓ.ಡಿ.ಯ competency ಯನ್ನು ಪ್ರಶ್ನೆ ಮಾಡಲಿಲ್ಲ. ಸಿ.ಓ.ಡಿ.ಯ ಮೂಲಕ ತಾವು ಏನು ತನಿಖೆ ಮಾಡಿಸುತ್ತೀವಿ ಎಂದು ಹೇಳಿ ನಿರ್ಧಾರ ಮಾಡಿರತಕ್ಕಂಥದ್ದನ್ನು ಸ್ವಾಗತ ಮಾಡುತ್ತೇನೆ. ಆದರೆ ಇದರಲ್ಲಿ ಏನಾಗುತ್ತದೆ ಎಂದರೆ ಇದು ಬೇರೆ ಡೆಥ್ಸ್ ಅಲ್ಲ, ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಸಬ್ ಇನ್ಸ್‌ಪೆಕ್ಟರೋ ಇದರಲ್ಲಿ ರೆಸ್ಪಾನ್ಸಿಬಲ್ ಇರುತ್ತಾರೆ. ಆದರಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಹೋಗಿ ಎನ್‌ಕ್ವೈರಿ ಮಾಡುತ್ತಾನೆ ಎಂದು ಹೇಳಿದರೆ ಏನು ಅರ್ಥ? ಆದಕ್ಕಾಗಿ ತಾವು ಲಾಕಪ್‌ನಲ್ಲಿ ಸಾಯತಕ್ಕಂಥ ಪ್ರಕರಣಗಳಲ್ಲಿ ಏನು ತನಿಖೆಗೆ ಆಜ್ಞೆ ಮಾಡುತ್ತೀರೋ, ಆದು ಸಿ.ಓ.ಡಿ ಯಲ್ಲಿ ಐ.ಜಿ.ಪಿ. ಲೆವೆಲ್‌ನಲ್ಲಿ ಅಧಿಕಾರಿಗಳಿದ್ದಾರೆ, ಎ.ಐ.ಜಿ. ಮಟ್ಟದ ಅಧಿಕಾರಿಗಳಿದ್ದಾರೆ. ಆ ರೀತಿ ಉನ್ನತ ಮಟ್ಟದ ಅಧಿಕಾರಿಗಳು ಹೋಗಬೇಕು ಎನ್ನತಕ್ಕಂಥ ಅಪ್ಪಣೆಯನ್ನು ಮಾಡಬೇಕು ಎಂದು ನಾನು ತಪ್ಪು ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ ನೀವು ಸಮಯವನ್ನು ನಿರ್ಧಾರ ಮಾಡುವುದು ಕಷ್ಟ ಎಂದು ಹೇಳುತ್ತೀರಿ. These are not ordinary deaths. ಇಡೀ ವರ್ಷದಲ್ಲಿ ಆರೇಳು ಸಾವುಗಳು ಆಗಿದೆ. ಇದು ಬಹಳ ಮಹತ್ವರವಾಗಿರತಕ್ಕಂಥದ್ದು. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್, ಸಬ್-ಇನ್ಸ್‌ಪೆಕ್ಟರ್ ಅಥವಾ ಡಿವೈಎಸ್‌ಪಿಯನ್ನು ಒಂದು ಮಾತ್ರಕ್ಕೆ ರೆಸ್ಪಾನ್ಸಿಬಲ್ ಇದ್ದಾನೆ ಎಂದು ಹೇಳಿದರೆ ಆ ಅಧಿಕಾರಿ ಎರಡು ಮೂರು ವರ್ಷವಾದ ಮೇಲೆ ವರದಿಯನ್ನು ಕೊಟ್ಟರೆ ಏನು ಉಪಯೋಗ ಆಗುತ್ತದೆ ? ಇದರಿಂದ ದಯವಿಟ್ಟು ಮೂರು ತಿಂಗಳೋ, ಆರು ತಿಂಗಳೋ, ನಾನು ವರ್ಷಾನುಗಟ್ಟಲೇ ಎಂದು ಹೇಳುವುದಿಲ್ಲ. ಮೂರು ತಿಂಗಳು, ಆರು ತಿಂಗಳ ಒಳಗಡೆ ವರದಿಯನ್ನು ಕೊಡುವಂತಾಗಬೇಕು. ೧೯೮೮—೮೯ರ ಸಾಲಿನಲ್ಲಿ ಒಂದು ವರ್ಷದಲ್ಲಿ ಸಿ.ಓ.ಡಿ. ತನಿಖೆಯಾಗಿ ಎರಡು ವರದಿಗಳು ಬಂದಿದೆ, ಇನ್ನು ಎರಡು ಬಂದಿಲ್ಲ ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ. ಯಾವಾಗ ಆ ವರದಿಗಳು ಬರುತ್ತದೆ? ಅಷ್ಟು ಹೊತ್ತಿಗೆ ಆ ಅಧಿಕಾರಿ ನಿವೃತ್ತಿ ಯಾಗಿರುತ್ತಾನೆ ಅಥವಾ ಬೇರೆ ಕಡೆ ವರ್ಗಾವಣೆಯಾಗಿರುತ್ತಾನೆ. ಇದರಿಂದ ಆಗುವ ಉಪಯೋಗವೇನು? ಒಟ್ಟಿನಲ್ಲಿ ಪೋಲೀಸ್ ಅಧಿಕಾರಿಗಳ ಮೇಲೆ ಒಂದು ಬಿಗಿ ಬರಬೇಕಾದರೆ ಸಮಯ ನಿಗದಿ ಆಗಬೇಕು ಮತ್ತು ಅಲ್ಲಿಗೆ ಉನ್ನತ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಮತ್ತೊಮ್ಮೆ ತಮ್ಮಲ್ಲಿ ಅಗ್ರಹಪಡಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಸಮಯ ನಿಗದಿ ಮಾಡುವುದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಪ್ರಿಫರೆನ್ಸ್‌ನ್ನು ಕೊಟ್ಟರು ಜಾಗ್ರತೆ ಆಗಬೇಕೆಂದು ಒತ್ತಾಯ ಮಾಡಬಹುದು. ಮತ್ತು ಈ ತರಹ ಘಟನೆಗಳನ್ನು ಬಹಳ ತೀವ್ರ ಗತಿಯಿಂದ ಪರಿಶೀಲನೆ ಮಾಡಬೇಕು ಮತ್ತು ಇಂಥಾದ್ದನ್ನು ಸೀರಿಯಸ್ ಆಗಿ ಸರ್ಕಾರ ನೋಟೀಸ್‌ಗೆ ತೆಗೆದು ಕೊಳ್ಳುತ್ತದೆ ಎನ್ನತಕ್ಕಂಥ ವಿಚಾರವನ್ನು ಕೂಡಾ ಎಲ್ಲಾ ಅಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತು ಈ ರೀತಿ ಲಾಕಪ್‌ನಲ್ಲಿ ಏನು ಮರಣ ಹೊಂದ್ದಾರೋ ಇದು ಅನೇಕ ಕಡೆ ಆಗಿದೆ, ನನ್ನ ಹತ್ತಿರ ಸವಿಸ್ತಾರ ವರದಿ ಇದೆ. ಲಾಕಪ್‌ನಲ್ಲಿ ಮರಣ ಹೊಂದಿದಿಂಥ ಪ್ರಕರಣಗಳಲ್ಲಿ ಅಲ್ಲಿರುವಂಥ ಸಿಬ್ಬಂದಿ ವರ್ಗದವರಿಗೆ ೩೦೭ರ ಪ್ರಕಾರ ಅವರನ್ನು ಅರೆಸ್ಟ್ ಮಾಡಿದ್ದೇವೆ, ಸಸ್ಪೆಂಡ್ ಮಾಡಿದ್ದೇವೆ ಮತ್ತು ಕೋರ್ಟ್‌ನಲ್ಲಿ ಕೇಸ್‌ನ್ನು ಕೂಡಾ ಹಾಕಿದ್ದೇವೆ. ಅದಕ್ಕಾಗಿ ಅಲ್ಲಿ ಇರುವಂಥ ಅಧಿಕಾರಿಗಳ ಬಗ್ಗೆ ನಾವು ಏನ ಲೀನಿಯೆಂಟ್ ಆಟಿಟ್ಯೂಡ್‌ನ್ನು ತೆಗೆದುಕೊಳ್ಳವುದಿಲ್ಲ, ತೆಗೆದುಕೊಳ್ಳುವಂಥ ವಿಚಾರವೂ ಕೂಡಾ ಸರ್ಕಾರಕ್ಕೆ ಇಲ್ಲ. ಇಲ್ಲಿ ಪ್ರಶ್ನೆ ಏನು ಎಂದು ಹೇಳಿದರೆ, ಈ ತನಿಖೆ ಆದಷ್ಟು ಜಾಗ್ರತೆ ಆಗಬೇಕು. ಇಷ್ಟು ಮಾತ್ರ ಹೇಳುತ್ತೇನೆ ಸಿ.ಓ.ಡಿ. ಉನ್ನತ ಅಧಿಕಾರಿಗಳ ಜೊತೆಯಲ್ಲಿ ಈ ಬಗ್ಗೆ ಸಮಾಲೋಚನೆಯನ್ನು ಮಾಡಿ ಇದಕ್ಕೆ ಹೆಚ್ಚು ಪ್ರಿಫರೆನ್ಸ್‌ನ್ನು ಕೊಟ್ಟು ಕೇಸುಗಳನ್ನು ಆದಷ್ಟು ತೀವ್ರವಾಗಿ ನಿಕಾಲಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಅಧಿಕಾರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಪರಿಶಿಷ್ಟ ಜಾತಿಗೆ ಸೇರಿದ ಐಎಎಸ್ ಅಧಿಕಾರಿಗಳ ಬಗ್ಗೆ

೧೬೨. ಶ್ರೀ ಎಂ. ಪಿ. ವೆಂಕಟೇಶ್ (ಮೆಗ್ಗಡದೇವನಕೋಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಪರಿಶಿಷ್ಟ ಜಾತಿಗೆ ಸೇರಿದ ಎಷ್ಟು ಜನ ಐಎಸ್ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. (ಅಧಿಕಾರಿಗಳ ವಿವರ ಮತ್ತು ಜಿಲ್ಲೆಗಳನ್ನು ಒದಗಿಸುವುದು.)

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

೧) ಶ್ರೀ ಆಶೋಕ್ ಕುಮಾರ್ ಸಿ. ಮನೋಲಿ, ಜಿಲ್ಲಾಧಿಕಾರಿ, ಬಳ್ಳಾರಿ.

೨) ಶ್ರೀ ಎನ್. ಸಿ. ಮುನಿಯಪ್ಪ, ಜಿಲ್ಲಾಧಿಕಾರಿ, ಚಿತ್ರದುರ್ಗ

೩) ಶ್ರೀ ಹೆಚ್. ಭಾಸ್ಕರ್, ಜಿಲ್ಲಾಧಿಕಾರಿ, ಕೊಡಗು

೪) ಶ್ರೀಮತಿ ರತ್ನಪ್ರಭ, ಕೆ. ಜಿಲ್ಲಾಧಿಕಾರಿ, ರಾಯಚೂರು

೫) ಶ್ರೀ ಬಿ. ಡಿ. ಕೇಲಂ, ಜಿಲ್ಲಾಧಿಕಾರಿ, ಮಂಡ್ಯ

೬) ಶ್ರೀ ಬಿ, ಆರ್. ಪೆರುಮಾಳ್, ಜಿಲ್ಲಾಧಿಕಾರಿ, ತುಮಕೂರು.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ನನ್ನ ೧೬ನೇ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಪ್ರೊ. ಎಂ, ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವೆಂಕಟೇಶ್ ರವರಲ್ಲಿ ಕೇಳಿಕೊಂಡಿದ್ದೇನೆ. ಇಲ್ಲಿ ಬಹಳ ಮುಖ್ಯವಾದ ವಿಷಯದ ಬಗ್ಗೆ ಅಂದರೆ ಈ ಲಾಕಪ್ ಸಾವುಗಳ ಬಗ್ಗೆ ಮಾತನಾಡುತ್ತಾ ಇದ್ದೇವೆ.

ಅಧ್ಯಕ್ಷರು.—ಗೃಹಖಾತೆಗಳ ಡಿಮ್ಯಾಂಡ್ ಬರುತ್ತದೆ. ಆಗ ಎಲ್ಲಾ ವಿಚಾರವನ್ನು ಕೂಡ ಹೇಳಬಹುದು. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ವೆಂಕಟೇಶ್‌ರವರು ಪ್ರಶ್ನೆಯನ್ನು ಕೇಳಿ ಬಿಟ್ಟಿದ್ದಾರೆ. I cannot go back to the previous question

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ಆರು ಜನ ಜಿಲ್ಲಾಧಿಕಾರಿಗಳನ್ನು ಹಾಕಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅವಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪರಿಶಿಷ್ಟ ಜಾತಿಗೆ ಸೇರಿದ ಐ.ಪಿ.ಎಸ್. ಅಧಿಕಾರಿಗಳು ಎಷ್ಟು ಜನ ಇದ್ದಾರೆ ಎಂದು ಪ್ರಶ್ನೆ ಹಾಕಿದ್ದಕ್ಕೆ ೧೩ ಜನರು ಎಂದು ಉತ್ತರವನ್ನು ಕೊಟ್ಟಿದ್ದಾರೆ ಎಷ್ಟು ಜನ ಪ್ರೋಲೀಸ್ ಅಧಿಕಾರಿಗಳನ್ನು ಹಾಕಿದ್ದೀರಿ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಪರಿಶಿಷ್ಟ ಜಾತಿಯವರಿಗೆ ರಕ್ಷಣೆಯನ್ನು ಒದಗಿಸಬೇಕು ಎಂದು ಸರ್ಕಾರ ಹೇಳುತ್ತದೆ. ಇಡೀ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಐ.ಪಿ.ಎಸ್. ಅಧಿಕಾರಿಗಳು ಇದ್ದರೂ ಕೂಡಾ ಸರ್ಕಾರ ಒಬ್ಬ ಎಸ್.ಪಿ.ಯನ್ನು ಕೂಡಾ ಹಾಕಿಲ್ಲ ಎಂದು ಹೇಳಿದರೆ ಪರಿಶಿಷ್ಟ ಜಾತಿಯವರಿಗೆ ಹೇಗೆ ರಕ್ಷಣೆ ಸಿಗುತ್ತದೆ ಎಂದು ತಾವು ಯೋಚನೆ ಮಾಡಬೇಕು.

ಇವುಗಳ ಎಷ್ಟರ ಮಟ್ಟಿಗೆ ಪರಿಶಿಷ್ಟ ಜಾತಿ ಅಧಿಕಾರಿಗಳ ಬಗ್ಗೆ ಹಾಗೂ ಪರಿಶಿಷ್ಟ ಜಾತಿಯವರ ಬಗ್ಗೆ ಕಾಳಜಿ ಇದೆ ಎಂದು ಇದರಿಂದ ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇವರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಪ್ರಶ್ನೆ ಕೇಳಿದ್ದು ಐ.ಎ.ಎಸ್ ಆಫೀಸರ್ಸ್ ಬಗ್ಗೆ. ಆದರೆ ಮಾನ್ಯ ಸದಸ್ಯರು ಸಪ್ಲಿಮೆಂಟರಿ ಕೇಳುತ್ತಾ ಇರುವುದು ಐ.ಪಿ.ಎಸ್. ಆಫೀಸರ್ಸ್ ಬಗ್ಗೆ.

ಅಧ್ಯಕ್ಷರು.—ಐ ಎ ಎಸ್ ಆಫೀಸರ್ಸ್ ಬಗ್ಗೆ ತಾವು ಹೇಳಿದ ಉತ್ತರಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಆದ್ದರಿಂದ ಅವರಿಗೆ ಉತ್ತರ ಸಿಕ್ಕಿತು ಎಂದಾಯಿತು....ಶ್ರೀ ಕುಶಾಲ ಅವರ ಪ್ರಶ್ನೆ...

ಶ್ರೀ ಎಂ. ಪಿ. ವೆಂಕಟೇಶ್.—ಪ್ರಶ್ನೆ ಸಂಖ್ಯೆ ೧೬ರ ಪ್ರಶ್ನೆಗೆ ಉತ್ತರದಲ್ಲಿ ಇಲ್ಲ ಎಂದು ಇದೆ. ಅದನ್ನು ನಾನು ತಪ್ಪು ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಐ.ಪಿ.ಎಸ್. ಆಫೀಸರ್ಸ್ ಬಗ್ಗೆ ತಾವು ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದ್ದೀರೆಂದು ನನಗೆ ನೆನಪು ಇದೆ. ಆದರೆ ಇವೊತ್ತು ಅದಕ್ಕೆ ಉತ್ತರ ಬಂದಿಲ್ಲ. ಅದಕ್ಕೆ ಯಾವ ದಿವಸ ಉತ್ತರ ಬರುತ್ತದೆ, ಆ ದಿವಸ ಸಪ್ಲಿಮೆಂಟರಿ ಉತ್ತರವನ್ನೂ ಒದಗಿಸುತ್ತೇನೆ. ಆಗ ತಾವು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡುತ್ತೇನೆ.

ಬಡ್ತಿ ಹೊಂದುವ ಹುದ್ದೆಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರಿಗೆ ಕಾದಿರಿಸಿರುವ ಹುದ್ದೆಗಳು

೧೩. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಸರ್ಕಾರದ ಸಚಿವಾಲಯ ಅಧೀನ ಕಾರ್ಯದರ್ಶಿಗಳ ಶಾಖಾಧಿಕಾರಿಗಳ ಮತ್ತು ಹಿರಿಯ ಸಹಾಯಕರುಗಳ ಹುದ್ದೆಗಳ ಸಂಖ್ಯೆ ಎಷ್ಟು ಮತ್ತು ಈ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಖ್ಯೆ ಎಷ್ಟು ? (ವರ್ಗವಾರು ಮತ್ತು ಜಾತೀವಾರು ವಿವರ ನೀಡುವುದು)